

‘ನಮ್ಮಪ್ಪ ದಿನಾಲು ತೋಟಕ್ಕೆ ಹೋಗಿ ಬರಿಗೈ ಅಲ್ಲಾಡಿಸುತ್ತಾ ಮನೆ ಸೇರುತ್ತಾನೆ. ಒಂದು ಬಾರಿಯಾದರೂ ಮಾವು ತರಲಿಲ್ಲ.’

‘ನಿಮ್ಮಪ್ಪ ಗೌಡ, ಹಾಗೆಲ್ಲ ತರಲ್ಲವ್ವ’ ಮುಂದೆ ಕುಳಿತ ಶಶಿ, ರಾಜು, ಮುರಳಿ ಹಿಂದೆ ಬಂದರು. ಅವರಿಗೂ ಮಾವು ನೀಡಿದ. ತಿನ್ನುತ್ತಾ ಮಾವಿನ ಸಿಹಿ ಹೊಗಳಾಡಿದರು.

‘ಮಹಾದೇವ ಸಂಜೆ ರಮಣಮೂರ್ತಿ ಮನೆಗೆ ಇಂಗ್ಲಿಷ್ ಟ್ಯೂಷನ್‌ಗೆ ನಾವು ಹೋಗುತ್ತೇವೆ ನೀನೂ ಬಾರೊ.’

‘ದುಡ್ಡು ಎಷ್ಟು ತೆಗೆದುಕೊಳ್ಳುತ್ತಾರೆ ಗೌರಿ?’

‘ತಿಂಗಳಿಗೆ ಮೂವತ್ತು ರೂಪಾಯಿ.’

‘ಅಪ್ಪನಿಗೆ ಕೇಳಿ ಹೇಳುತ್ತೇನೆ.’ ಒಸಗೆ ಮಾತಿನ ಬಳ್ಳಿ ಪಸರಿಸಿ ತುಟಿ–ತುಟಿಗಳ ಮೇಲೆ ನಗುವಿನ ಹೂವು ಕುಣಿಯಿತು. ಗಂಟೆ ಬಾರಿಸಿತು. ಮಕ್ಕಳು ಒಂದಾಗಿ ಶಾಲೆ ಹಜಾರದೊಳಗೆ ಬಂದು ಸಾಲಾಗಿ ಕುಳಿತರು. ಗುಮಾಸ್ತ ಬಂದು ಎಲ್ಲರೆದುರು ಒಂದೊಂದು ಸ್ಟೀಲ್ ತಟ್ಟೆ–ಗ್ಲಾಸು ಇಟ್ಟು ಅನ್ನ–ಸಾರು ಬಡಿಸಿದ. ತಿನ್ನುತ್ತಿದ್ದರು. ಬಾಗಿಲ ಬಳಿ ಇದ್ದ ಕುರ್ಚಿ ಮೇಲೆ ಕುಳಿತು ಶಾಮಾಶಾಸ್ತ್ರಿ ಅವರತ್ತ ಕಣ್ಣಾಡಿಸುತ್ತಿದ್ದ. ತಿಂದುಂಡು ಶಾಲೆ ಆವರಣದೊಳಗೆ ಬಂದು ಆಡಿಕೊಳ್ಳುತ್ತಿದ್ದರು.

ಮಹಾದೇವ ಮಧ್ಯಾಹ್ನ ಶಾಲೆಗೆ ಚಕ್ಕರ್ ಕೊಟ್ಟು ಮನೆಗೆ ಬಂದ. ಒಳಗಡೆ ಯಾರೂ ಇಲ್ಲದೆ ಬಿಕೋ ಎನ್ನುತ್ತಿತ್ತು. ಕೈಯೊಳಗಿದ್ದ ಪುಸ್ತಕ ನೆಲದ ಮೇಲೆ ಒಗೆದ. ಮನ ಬೇಸರಿಸಿ ಮಾರಿಗುಡಿ ಕಟ್ಟೆಯತ್ತ ಬಂದು ಸುಳಿದಾಡಿದ. ಬದಿಯಲ್ಲಿದ್ದ ಹಾಳು ಧರ್ಮಶಾಲೆಯೊಳಗೆ ಕುಳಿತ ಐದಾರು ಜನ ಐವತ್ತು ಪೈಸೆ, ಒಂದು ರೂಪಾಯಿ ನಾಣ್ಯಗಳನ್ನು ಮುಂದಿರಿಸಿ ಇಸ್ಪೇಟು ಆಡುತ್ತಿದ್ದರು. ಅವರ ಹಿಂದೆ ಹೋಗಿ ನೋಡುತ್ತಾ ನಿಂತ. ಕೈ ತುಂಬಾ ಇಸ್ಪೇಟು ಎಲೆಗಳನ್ನು ಹಿಡಿದಾಡುತ್ತಿರುವವರಲ್ಲಿ ಓರ್ವ ‘ಏ, ಇಲ್ಲೇನು ನೋಡುತ್ತಾ ನಿಂತಿರುವೆ? ಹೋಗು’ ಎಂದು ಗದರಿಸಿದ. ಮರು ಮಾತಿಲ್ಲದೆ ನಿರುತ್ತರದಿಂದ ಪಲಾಯನ ಮಾಡಿ ಮಾರಿಗುಡಿ ಮುಂದೆ ಬಂದ. ಬಣ್ಣದ ಬುಗುರಿ ಗಿರ್ರನೆ ತಿರುಗುತ್ತಿತ್ತು. ಅದನಾಡಿಸಿ ನೋಡುತ್ತಾ ನಿಂತ ಹುಡುಗರೊಂದಿಗೆ ಬೆರೆತ.

ಸಂಜೆಗತ್ತಲಾಯಿತು. ಬೀದಿಯಲ್ಲಿ ಹಿಂಡು–ಹಿಂಡು ದನಕರು ಎಮ್ಮೆ ಹೊಡೆದುಕೊಂಡು ದನಗಾಯಿ ಬಾಲಕರು ಹಿಂದೆ ಹೆಜ್ಜೆ ಹಾಕಿದರು. ತುಳಿದ ದಾರಿಯಿಂದ ಧೂಳು ಹೊಗೆಯಂತೆ ಹಬ್ಬಿ ಸುಳಿ ಸುಳಿಯಾಗಿ ಸುಳಿದಾಡಿ ಮೇಲಾಡುತ್ತಿತ್ತು. ಸಂಧ್ಯಾ ಬೆಳಕಿನಲ್ಲಿ ಚಿಕ್ಕಯ್ಯ ಮನೆಗೆ ಬಂದ. ಮಹಾದೇವ ಪುಸ್ತಕ ಓದುತ್ತಿದ್ದ. ನೋಡಿ ಸಂತಸಿಸಿದ.

ಅಪ್ಪ ಬಂದುದ್ದನರಿತು ಪುಸ್ತಕ ಮುಚ್ಚಿ, ‘ಅಪ್ಪಾ ರಮಣಮೂರ್ತಿ ಮನೆಗೆ ನನ್ನ ಗೆಳೆಯರು ಟ್ಯೂಷನ್‌ಗೆ ಹೋಗುತ್ತಿದ್ದಾರೆ, ನಾನು ಅವರೊಂದಿಗೆ ಹೋಗುತ್ತೇನೆ’ ಬೆಪ್ಪಾಗಿ ನಿಂತ.

‘ಬೇಡ, ನೀನು ಮನೆಯಲ್ಲಿ ಓದಿಕೋ...’

ತಗಾದೆ ಮಾಡಿ ಹಠ ಹಿಡಿದ. ಸಮಾಧಾನಪಡಿಸಿ ಅಳುಕುತ್ತ ಜೊತೆ ಕರೆದುಕೊಂಡು ಹೋಗಿ ರಮಣಮೂರ್ತಿ ಮನೆ ಹೆಬ್ಬಾಗಿಲಿನ ಒಳಗೆ ಬಂದು ನಿಂತ. ಅಂಗಳದಲ್ಲಿ ಕುಳಿತ ಹತ್ತಾರು ಹುಡುಗ–ಹುಡ್ಗೀರು ನೋಟ್ ಬುಕ್‌ನಲ್ಲಿ ಬರೆಯುತ್ತಿದ್ದರು. ಅದ ನೋಡುತ್ತಾ ರಮಣಮೂರ್ತಿ ನಿಂತಿದ್ದ. ಅವನ ದೇಹದಲ್ಲಿ ಹರಿಯುವ ರಕ್ತದ ಕಣಕಣದಲ್ಲೂ ವೈಚಾರಿಕತೆ ಮತ್ತು ವೈಜ್ಞಾನಿಕ ಮನೋಭಾವ ಮೈಗೂಡಿಸಿಕೊಂಡು ಬೆಳೆದ ಪ್ರಗತಿಪರ ಆಶಾವಾದಿ. ಸರಕಾರಿ ಪ್ರಾಥಮಿಕ ಶಾಲೆಯ ನಿವೃತ್ತ ಶಿಕ್ಷಕ. ಇಳಿ ವಯಸ್ಸಿನಲ್ಲೂ ಉತ್ಸಾಹದಿಂದ ಮಕ್ಕಳಿಗೆ ಮನೆ ಪಾಠ ಹೇಳಿ ಕೊಡುತ್ತಿದ್ದ. ನಸು ನಕ್ಕು ಗೌರಿ ‘ಮಹಾದೇವ ಒಳಗೆ ಬಾ’ ಎಂದು ಕೂಗಿದ್ದಳು. ‘ಓ ಚಿಕ್ಕಯ್ಯ ಬಾ ಒಳಗೆ ಏಕೆ ಬಾಗಿಲ ಬಳಿ ನಿಂತಿರುವೆ?’ ಹತ್ತಿರ ಬಂದು ನಿಟ್ಟುಸಿರು ಬಿಟ್ಟ.

‘ನನ್ನ ಮಗ ನಿಮ್ಮ ಹತ್ರ ಓದು–ಬರಹ ಕಲಿಯಲು ಬರುತ್ತೇನೆಂದು ಹಠ ಹಿಡಿದು ರಂಪ ಮಾಡುತ್ತಿದೆ. ಅದಕ್ಕೆ ನಾಲ್ಕು ಅಕ್ಷರ ಕಲಿಸಿ ಪುಣ್ಯ ಕಟ್ಟಿಕೊಳ್ಳಿ.’

‘ಸರಿ ಕಣಯ್ಯಾ ಇದರಲ್ಲಿ ಏನಿದೆ ಪುಣ್ಯ, ಎಲ್ಲ ಮಕ್ಕಳಂತೆ ನಿನ್ನ ಮಗನೂ ನನಗೊಬ್ಬ ವಿದ್ಯಾರ್ಥಿ.’

‘ಹಣ ಎಷ್ಟು ಕೊಡಬೇಕು ಧಣಿ.’

‘ಹಣ–ಗಿಣ ಆ ಮೇಲೆ ವಿಚಾರಿಸಿದರಾಯಿತು. ಮೊದಲು ನಿನ್ನ ಮಗ ಚೆನ್ನಾಗಿ ಓದಲಿ, ಮಹಾದೇವ ಬಾರೊ ಇಲ್ಲಿ, ಕುಳಿತುಕೊ.’ ಬರೆಯುವ ಹುಡುಗರ ಸಾಲಿನಲ್ಲಿ ಹೋಗಿ ಕುಳಿತ. ಕೈ ಜೋಡಿಸಿ ನಮಸ್ಕರಿಸಿ ‘ಧಣಿ ನಿಮ್ಮ ಮನಸ್ಸು, ಹೃದಯ ತುಂಬಾ ದೊಡ್ಡದು.’ ಎಂದಾಡಿ ಬಾಗಿಲ ಹೊರಗೆ ಹೆಜ್ಜೆ ಹಾಕಿದ.

ಮನೆಯಲ್ಲಿ ರಮಣಮೂರ್ತಿ ಆತನ ಅರ್ಧಾಂಗಿ ಲತಾ ಒಬ್ಬರಿಗೊಬ್ಬರು ಇಳಿ ಬಾಳಿಗೆ ಆಸರೆಯಾಗಿ ಜೀವಿಸುತ್ತಿದ್ದರು. ಇದ್ದೆರಡು ಗಂಡು ಮಕ್ಕಳು ಬೆಳೆಯುತ್ತ ಹಳ್ಳಿ ಬಿಟ್ಟು ಓದಲು ಪಟ್ಟಣ ಪಟ್ಟಣ ಸೇರಿ ಅಲ್ಲಿಯೆ ಬೇರು ಬಿಟ್ಟು ಬೆಳೆದು ದೊಡ್ಡವರಾಗಿ ಉಪಜೀವನ ಸಾಗಿಸಲು ಸರಕಾರಿ ನೌಕರಿ ಹಿಡಿದು, ಕೆಂಪು ಹೆಂಡತಿಯರ ಜೊತೆ ಹಾಯಾಗಿ ಬದುಕುತ್ತಿದ್ದರು. ನೆನಪಾದಾಗೊಂದು ಬಾರಿ ಊರಿಗೆ ಬಂದು ಅಪ್ಪ–ಅಮ್ಮನ ಯೋಗಕ್ಷೇಮ ನೋಡಿ, ವಿಚಾರಿಸಿಕೊಂಡು ಹೋಗುತ್ತಿದ್ದರು. ಹೆತ್ತ ಮಕ್ಕಳು ಇಳಿಗಾಲದಲ್ಲಿ ಜೊತೆಗಿಲ್ಲದ ಕೊರಗು ಸದಾ ಮನ ಕಾಡುತ್ತಿತ್ತು. ಆಗಾಗ ಬಂದು ಉಸಿರು ತಡೆ ಹಿಡವ ಎದೆನೋವು ಇವುಗಳ ಆತಂಕದ ನಡುವೆ ಬಳಲಿ ರಮಣಪೂರ್ತಿ ಹತಾಶನಾಗಿದ್ದ. ಕಲಿಯಲು ಬರುವ ಮಕ್ಕಳ ಮುಖ ನೋಡಿ ದಿನ ಕಳೆಯುತ್ತಿದ್ದ. ಎಲ್ಲ ಮಕ್ಕಳಲ್ಲಿರಿಸಿದ ಪ್ರೀತಿಯಲ್ಲಿ ಹೆಚ್ಚಿನ ಒಂದು ಪಾಲು ಮಹಾದೇವನಲ್ಲಿತ್ತು. ಅವನ ಕಂಡರೆ ಮನ ಉಲ್ಲಾಸಗೊಳ್ಳುತ್ತಿತ್ತು.

ಬಿಳಿ ಮೋಡದಲ್ಲಿ ಹೊಳೆಯುವ ಸೂರ್ಯ ಕಳೆಗುಂದಿದ. ಅಂಗಳ ಕಟ್ಟೆಯಲ್ಲಿದ್ದ ಮಣ್ಣಿನ ಕುಂಡದೊಳಗಿದ್ದ ತುಳಸಿ ನಳನಳಿಸುತ್ತಿತ್ತು. ಅದಕ್ಕೆ ಅಕ್ಕರೆಯಿಂದ ನೀರೆರೆಯುತ್ತ ನಿಂತ ರಮಣಮೂರ್ತಿಗೆ ಇದ್ದಕ್ಕಿದ್ದಂತೆ ಎದೆನೋವು ಕಾಣಿಸಿತು. ಉಸಿರೆಳೆಯಲು ಕಷ್ಟವಾಯಿತು. ವಾಂತಿ ಬಂದಂತಾಗಿ ತಲೆ ಸುತ್ತಿ ನೆಲಕ್ಕೆ ಕುಸಿದು ಬಿದ್ದ. ಲತಾ ಗಾಬರಿಯಾಗಿ ಓಡುತ್ತ ಬಂದು ‘ಅಯ್ಯೋ ರಾಮ! ಏನಾಯಿತ್ರೀ...’ ಕಿರುಚಾಡಿ ಗಟ್ಟಿಯಾಗಿ ಕೈಹಿಡಿದಳು, ತಣ್ಣಗಿತ್ತು, ತುದಿಮೂಗಿನ ಮೇಲೆ ಬೆರಳಿಟ್ಟಳು. ಉಸಿರು ನಿಂತಿತ್ತು. ಎದೆ ಬಡೆದುಕೊಂಡು ಗೋಳಾಡಿ ಅಳುತ್ತಿದ್ದಳು.

ನೆರೆಹೊರೆ ಜನ ಧಾವಿಸಿ ಬಂದು ನೋಡಿ ಸಂತಾಪದ ಮಾತುಗಳಾಡುತ್ತ ಬಾಗಿಲಿನ ಮುಂದೆ ನೆರೆದಿದ್ದರು. ಸುದ್ದಿ ಊರ–ಕೇರಿ ಜನರ ಬಾಯಿ ಮಾತಾಗಿ ಮಾರಿಗುಡಿ ಕಟ್ಟೆ ಕಲ್ಲ ಮೇಲೆ ಕುಳಿತು ಗೆಳೆಯರೊಂದಿಗೆ ‘ಹುಲಿಮನಿ’ ಆಟವಾಡುತ್ತಿದ್ದ ಮಹಾದೇವನ ಕಿವಿ ಮುಟ್ಟಿತು. ದಿಗಿಲು ಬಿದ್ದು ಓಡುತ್ತ ರಮಣಮೂರ್ತಿ ಮನೆಗೆ ಬಂದ. ಬಾಗಿಲ ಮುಂದೆ ನಿಂತ ಅಪರಿಚಿತನೊಬ್ಬ ತಡೆದು ‘ಏ, ಒಳಗೆ ಹೋಗಬೇಡ’ ಎಂದು ಕಣ್ಣಗಲಿಸಿ ಗದರಿಸಿದ.

ಮಹಾದೇವನ ಮೈಯೊಳಗೆ ಹರಿದಾಡುತ್ತಿರುವ ನೆತ್ತರೆಲ್ಲ ಬಿಸಿಯಾಯಿತು. ಕಣ್ಣುಗಳು ಕೆಂಪಾದವು. ಅವನ ಕಣ್ಣಿಗೆ ಕಣ್ಣಿಟ್ಟು ದಿಟ್ಟಿಸಿ ನೋಡುತ್ತಿದ್ದ. ಅಪರಿಚಿತನದು ಒಣಗಿದ ಪಾಪಾಸುಕಳ್ಳಿ ಗಿಡದಂತ ದೇಹ. ಬೇವಿನ ತೊಗಟೆಯಂತೆ ಸುಕ್ಕುಗಟ್ಟಿದ ಮುಖ. ತಲೆಗೂದಲು ನಾರುಮಡಿಯಂತೆ ಜಿಡ್ಡುಗಟ್ಟಿದ್ದವು. ಕೊಂಕು ಮೂಗಿನಿಂದ ಸಿಂಬಳ ಸುರಿಯುತ್ತಿತ್ತು. ಅದರ ಮೇಲೆ ನೊಣ ದಾಳಿ ಮಾಡುತ್ತಿದ್ದವು. ಬಾಯಿಯೊಳಗಿದ್ದ ಹಲ್ಲು ಹಳದಿಗುಂದಿದವು. ಕೈಕಾಲ ಬೆರಳು ಮುಟರುಗಟ್ಟಿದವು. ಧರಿಸಿದ ಅಂಗಿ ದೇಹದ ಬೆವರು ಕುಡಿದು ಉಪ್ಪೊಡೆದಿತ್ತು.

ನೆರೆದ ಜನರಲ್ಲಿದ್ದ ಚಂದ್ರಗೌಡ ಬಳಿಬಂದು ‘ಮಹಾದೇವ ಏನು ಆ ವಿರೂಪ ಮುಖ ನೋಡುತ್ತ ನಿಂತಿರುವೆ? ಅವನ ಮುಖದಂತೆ ಮನಸ್ಸು ಇದೆ.’ ಎಂದವನೇ ಗಂಟಲು ಕ್ಯಾಕರಿಸಿ ‘ಥೂ!’ ಎಂದು ಉಗಿದು, ‘ಮಕ್ಕಳು ದೇವರು! ಅವರಲ್ಲಿ ಬೇಧ ಎಣಿಸಬಾರದು’ ಎಂದು ಕಡ್ಡಿ ಮುರಿದಂತೆ ಅಪರಿಚಿತನಿಗೆ ಹೇಳಿ, ಮಹಾದೇವನ ಕೈಬೆರಳು ಹಿಡಿದುಕೊಂಡು ಮನೆಯೊಳಗೆ ಕರೆದೊಯ್ದ.